**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**

**ವಿರಾಜಪೇಟೆ**

**ಓ.ಎಸ್. ಸಂಖ್ಯೆ : *18/2012***

**ಪಿಡಬ್ಲ್ಯೂ- *1* ಫೆಮಿತಾ**

**ದಿನಾಂಕ : *13-12-2022* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಭಾಷಾಂತರಕಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟಿ ಸವಾಲು : ಶ್ರೀ. ಎನ್ ಜಿ ಕೆ ಪ್ರತಿವಾದಿ *1 (ಎ) (ಬಿ), 2* ಹಾಗೂ *3* ರವರುಗಳ ಪರ ವಕೀಲರಿಂದ :**

ನನ್ನ ವಾಸ ಕೇರಳದ ಕಣ್ಣೂರು ಜಿಲ್ಲೆಯ ಚಪ್ಪಂಗ ಮಕನ್ ಹೌಸ್ ಚಪ್ಪಂಗ್ ಫರಂದ್ ತಟ್ಟ ಆಗಿರುತ್ತದೆ ಎಂದರೆ ಸಾಕ್ಷಿಯು ವಿರಾಜಪೇಟೆಯ ಟಿಪ್ ಟಾಪ್ ಮಳಿಗೆಯ ಮೇಲೆ ವಾಸವಿರುತ್ತೇನೆ, ಅಗತ್ಯವಿದ್ದಲ್ಲಿ ಮೇಲೆ ಹೇಳಿದ ಕೇರಳ ವಿಳಾಸಕ್ಕೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಆಧಾರ್ ಕಾರ್ಡ್, ಚುನಾವಣಾ ಗುರುತಿನ ಚೀಟಿ ಹಾಗೂ ಇತರೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಆ ರೀತಿಯ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಕಣ್ಣಾರು ಜಿಲ್ಲೆಯಲ್ಲಿ ಮತದಾನ ಮಾಡುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವಿರಾಜಪೇಟೆಯಲ್ಲಿ ಮತದಾನ ಮಾಡುತ್ತೇನೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ಕೆವಿಯಟ್ ಅರ್ಜಿ ಸಲ್ಲಿಸಿದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಿಪಿ1 ರಲ್ಲಿರುವ ಸಹಿ ನನ್ನದೆ. ಅದರಲ್ಲಿರುವ ಸಂಗತಿಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಸದರಿ ದಾಖಲೆಯಲ್ಲಿ ನನ್ನ ವಿಳಾಸವನ್ನು ಮೇಲೆ ಹೇಳಿದ ಕೇರಳದ ವಿಳಾಸ ನಮೂದಿಸಲಾಗಿದೆ ಎಂದರೆ ಸಾಕ್ಷಿ ಆ ಸಮಯದಲ್ಲಿ ನನ್ನ ಗಂಡ ತೀರಿ ಹೋಗಿದ್ದರಿಂದ ನಾನು ಕೇರಳದ ಸದರಿ ವಿಳಾಸದಲ್ಲಿ ವಾಸವಿದ್ದಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ನಿಪಿ1 ನ್ನು ನನ್ನ ಮಾವ ಕುಂಜ್ಞ ಮಹಮದ್ ಹಾಜಿ ನಮ್ಮ ಪರವಾಗಿ ಬರೆದಿರುತ್ತಾರೆ ಎಂದರೆ ಸರಿ. ಸದರಿ ದಾಖಲೆಯಲ್ಲಿ ನಮಗೆ ಬಿಡುಗಡೆ /

ಖುಲಾಸೆ ಮಾಡಿದ ಆಸ್ತಿಯ ವಿವರ ತಿಳಿಸಲಾಗಿದೆ ಎಂದರೆ ಸರಿ. ನನಗೆ ಮುಸ್ಲಿಂ ಕಾನೂನು ಸ್ವಲ್ಪಮಟ್ಟಿಗೆ ಗೊತ್ತಿದೆ. ನಮ್ಮ ಮುಸ್ಲಿಂ ಕಾನೂನಿನ ಪ್ರಕಾರ ಗಂಡ ಸತ್ತರೆ ಅವರ ಮಕ್ಕಳಿಗೆ ತಾತ ಅಂದರೆ ಗಂಡನ ತಂದೆ ಗಾರ್ಡಿಯನ್ ಆಗುತ್ತಾರೆ ಎಂದರೆ ಸರಿ. ನಮ್ಮ ಮಾವನಾದ ಕುಂಜ್ಞ ಮಹಮದ್ ಹಾಜಿ ರವರಿಗೆ ಮೂರು ಗಂಡು ಮಕ್ಕಳು ಹಾಗೂ ಮೂರು ಹೆಣ್ಣು ಮಕ್ಕಳು ಎಂದರೆ ಸರಿ. ನಮ್ಮ ಮಾವನ ಕುಟುಂಬ ಕೊಡಗು ಜಿಲ್ಲೆಯಲ್ಲಿ ತುಂಬಾ ಹೆಸರಾಂತ ವ್ಯಾಪಾರ ಹಾಗೂ ವಹಿವಾಟು ಇರುವ ಕುಟುಂಬ ಎಂದರೆ ಸರಿ.

ನಮ್ಮ ಮಾವನಿಗೆ ಟಿಪ್ ಟಾಪ್ ಶಾಪಿಂಗ್ ಸೆಂಟರ್ ಅಲ್ಲದೆ ಕೆದಮುಳ್ಳೂರು, ಅರೆಕಾಡು ಹಾಗೂ ಕೇರಳದಲ್ಲಿ ಬೇರೆ ಬೇರೆ ವ್ಯವಹಾರಗಳು ಇದೆ ಎಂದರೆ ಸರಿ. ಕೆದಮುಳ್ಳೂರಿನಲ್ಲಿ ನನಗೆ ಹಾಗೂ ನೌಶೀರ್ ರವರಿಗೆ ಒಟ್ಟಾಗಿ ಒಂದು ಕಾಫೀ ತೋಟ ಇರುತ್ತದೆ ಎಂದರೆ ಸರಿ. ಈ ದಾವೆ ಸಲಿಸಿದಾಗಿನಿಂದ ನಾನಾಗಲಿ, ನನ್ನ ಬಾವನಾದ ನೌಶೀರ್ ರವರು ಸದರಿ ಕೆದಮುಳ್ಳೂರಿನ ತೋಟದಲ್ಲಿ ಕಾಫೀ ಕುಯ್ದಿರುವುದಿಲ್ಲ ಎಂದರೆ ಸರಿ. ಈ ದಾವೆಯಲ್ಲಿ ತಾತ್ಕಲಿಕ ತಡೆಯಾಜ್ಞೆ ಪಡೆದಿದ್ದರಿಂದ ಆ ರೀತಿ ನಾನಾಗಲಿ, ನನ್ನ ಬಾವ ನೌಶೀರ್ ಆಗಲಿ ಸದರಿ ತೋಟಕ್ಕೆ ಹೋಗಿರುವುದಿಲ್ಲ ಎಂದರೆ ಸಾಕ್ಷಿಯು ಗೊಂದಲ ಉಂಟಾಗುತ್ತದೆ ಎಂಬ ಕಾರಣಕ್ಕಾಗಿ ಆ ರೀತಿ ಹೋಗಿರುವುದಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ನೌಶೀರ್ ರವರಿಗೂ ತೋಟಕ್ಕೆ ಹೋಗಲು ಬಿಟ್ಟಿರಲಿಲ್ಲ ಎಂದರೆ ಸಾಕ್ಷಿಯು ಗಂಡ ತೀರಿಕೊಂಡ ಮೇಲೆ ನಾನು ಆ ವಿಚಾರಕ್ಕೆ ಹೋಗಿರುವುದಿಲ್ಲ ಎಂದು ನುಡಿಯುತ್ತಾರೆ.

ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ಸಮಯಾವಕಾಶವನ್ನು ಕೋರಿದ್ದು, ಸಮಾಯವಕಾಶವನ್ನು ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-
(ಸಂತೋಷ ಕೊಠಾರಿ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.